**ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ. ನ್ಯಾ.ದಂಡಾಧಿಕಾರಿಗಳ ನ್ಯಾಯಾಲಯ, ಆನೇಕಲ್.**

| | |
|---|---|
| ಓ.ಎಸ್. ನಂ | **14/2017** |
| ಪಿ.ಡಬ್ಲ್ಯೂ | **01** |
| ದಿನಾಂಕ | **16.11.2023** |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು : ಶ್ರೀ ಸಿ.ಎಮ್ ಪ್ರತಿವಾದಿಯ ಪರ ವಕೀಲರಿಂದ.**

ನಾನು ಲಿಂಗಾಪುರದಲ್ಲಿ ಸುಮಾರು 40 ವರ್ಷಗಳಿಂದ ವಾಸವಾಗಿದ್ದೇನೆ. ನಾನು ಪಿ.ಯು.ಸಿ ವರೆಗೆ ವಿದ್ಯಾಭ್ಯಾಸವನ್ನು ಮಾಡಿರುತ್ತೇನೆ. ನನಗೆ ಕನ್ನಡ ಮತ್ತು ಇಂಗ್ಲೀಷ್ ಓದಲು ಮತ್ತು ಬರೆಯಲು ಬರುತ್ತದೆ. ದಾವಾ ಅನುಸೂಚಿ ಸ್ವತ್ತಿನ ಹಳೆಯ ಸರ್ವೆ ನಂ.5 ಮತ್ತು ಹೊಸ ಸರ್ವೆ ನಂ.5/4 ಆಗಿರುತ್ತದೆ. ದಾವಾ ಅನುಸೂಚಿ ಸ್ವತ್ತಿನ ಚೆಕ್ ಬಂದಿ ಈ ಕೆಳಕಂಡಂತಿದೆ :

ಪೂರ್ವಕ್ಕೆ : ನಮ್ಮ ಬಾಬ್ತು ಆಸ್ತಿ,
ಪಶ್ಚಿಮಕ್ಕೆ : ಸರ್ಕಾರಿ ಓಣಿ,
ಉತ್ತರಕ್ಕೆ : ಪಂಚಾಯತಿ ರಸ್ತೆ,
ದಕ್ಷಿಣಕ್ಕೆ : ಪ್ರತಿವಾದಿಯ ಆಸ್ತಿ ಇರುತ್ತದೆ.

ನನ್ನ ತಂದೆಯವರು ಆರೋಗ್ಯವಾಗಿರುವುದಿಲ್ಲ. ಅವರ ಬಳಿ ಒಂದು ಟಿ.ವಿ.ಎಸ್. ಎಕ್ಸೆಲ್ ವಾಹನ ಇದೆ ಎಂದರೆ ಸರಿ. ಅವರು ಎಲ್ಲಾ ಕಡೆ ಓಡಾಡುತ್ತಿದ್ದಾರೆ ಎಂದರೆ ಸರಿಯಲ್ಲ. ಅವರು 5-6 ಹಸುಗಳನ್ನು ಸಾಕುತ್ತಿದ್ದಾರೆ ಎಂದರೆ ಸರಿ. ಅವರು ಹೈನುಗಾರಿಕೆಯನ್ನು ಸಹ ಮಾಡುತ್ತಿದ್ದಾರೆ ಎಂದರೆ ಸಾಕ್ಷಿಯು ನಾನು ಮತ್ತು ನನ್ನ ತಂದೆಯವರು ಸೇರಿ ಮಾಡುತ್ತಿದ್ದೇವೆ ಎಂದು ನುಡಿದಿರುತ್ತಾರೆ. ನನ್ನ ತಂದೆ ಹಾಲು ಉತ್ಪಾದಕರ ಸಂಘದಲ್ಲಿ ಸಕ್ರಿಯ ಸದಸ್ಯರು ಎಂದರೆ ಸರಿಯಲ್ಲ. ನನ್ನ ತಂದೆ ಆರೋಗ್ಯವಾಗಿಲ್ಲ ಎಂದು ಸುಳ್ಳು ಪ್ರಮಾಣ ಮಾಡಿ ಅಧಿಕಾರ ಪತ್ರವನ್ನು ಅವರಿಂದ ಪಡೆದಿರುತ್ತೇನೆ ಎಂದರೆ ಸರಿಯಲ್ಲ. ನಿಪಿ14 ರಲ್ಲಿ ನಮೂದು ಆಗಿರುವಂತೆ ನನ್ನ ತಂದೆಗೆ ಯಾವುದೇ ಖಾಯಿಲೆಗಳು ಇರುವುದಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆಗೆ ಸಂಬಂಧಿಸಿದ ವೈದ್ಯಕೀಯ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ನಾನು ಸಲ್ಲಿಸಿಲ್ಲ ಎಂದರೆ ಸರಿ. ಒಂದು ಪಕ್ಷ ನನ್ನ ತಂದೆ ನ್ಯಾಯಾಲಯದಲ್ಲಿ ವಿಚಾರಣೆಗೆ ಒಳಪಟ್ಟರೆ ಸತ್ಯಾಂಶ ಹೊರಬರುತ್ತದೆ ಎಂದು ಸುಳ್ಳು ಸಾಮಾನ್ಯ ಅಧಿಕಾರ ಪತ್ರವನ್ನು ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ. ನಿಪಿ1 ಮತ್ತು

2ರ ಮೂಲ ದಾಖಲಾತಿಗಳನ್ನು ನಾನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ ಎಂದರೆ ಸರಿ. ಸದರಿ ಪತ್ರಗಳು ನಮ್ಮ ಬಳಿ ಇಲ್ಲ ಹಾಗಾಗಿ ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ನಿಪಿ1ರಂತೆ ಮುನಿಯಪ್ಪರವರು ಸುಬ್ಬಯ್ಯ ಶೆಟ್ಟಿಯವರಿಗೆ ದಾವಾ ಅನುಸೂಚಿ ಸ್ವತ್ತನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ನಿಪಿ1ರಲ್ಲಿರುವ ಚೆಕ್ ಬಂದಿ ಸರಿಯಾಗಿದೆ ಎಂದರೆ ಸರಿ. ನಿಪಿ2ರಂತೆ ದಾವಾ ಅನುಸೂಚಿ ಸ್ವತ್ತನ್ನು ಸುಬ್ಬಯ್ಯ ಶೆಟ್ಟಿಯವರಿಂದ ನನ್ನ ತಂದೆ ಖರೀದಿಸಿರುತ್ತಾರೆ ಎಂದರೆ ಸರಿ. ನಿಪಿ2ರಲ್ಲಿ ನಮೂದು ಆಗಿರುವ ಚೆಕ್ ಬಂದಿ ಸರಿ ಇದೆ ಎಂದರೆ ಸರಿ. ದಾವಾ ಅನುಸೂಚಿ ಸ್ವತ್ತಿನ ಉತ್ತರ ಭಾಗಕ್ಕೆ ಪ್ರತಿವಾದಿಯ ತಂದೆಯ ಬಾಬ್ತು 13 ಗುಂಟೆ ಆಸ್ತಿ ಇರುತ್ತದೆ ಎಂದರೆ ಸರಿ. ಸದರಿ ಆಸ್ತಿಯಲ್ಲಿ ಪ್ರತಿವಾದಿಗಳು ಉಳುಮೆ ಮಾಡಿಕೊಂಡು ಸ್ವಾಧೀನಾನುಭವದಲ್ಲಿರುತ್ತಾರೆ ಎಂದರೆ ಸರಿ. ದಾವಾ ಅನುಸೂಚಿ ಸ್ವತ್ತಿನ ಪಶ್ಚಿಮ ದಿಕ್ಕಿನಲ್ಲಿರುವ ಸರ್ಕಾರಿ ರಸ್ತೆಯ ಪೂರ್ವ ದಿಕ್ಕಿಗೆ ನನ್ನ ಆಸ್ತಿ ಮತ್ತು ಮನೆ ಇರುತ್ತದೆ ಎಂದರೆ ಸರಿಯಲ್ಲ. ಸದರಿ ರಸ್ತೆಯು ದಕ್ಷಿಣ ದಿಕ್ಕಿನಿಂದ ಉತ್ತರ ದಿಕ್ಕಿಗೆ ಹಾದು ಹೋಗುತ್ತದೆ ಎಂದರೆ ಸರಿ. ಸದರಿ ರಸ್ತೆಯ ಪಶ್ಚಿಮಕ್ಕೆ ಸರ್ಕಾರಿ ಶಾಲೆ ಇದೆ ಎಂದರೆ ಸರಿ. ಆ ಶಾಲೆಯಲ್ಲಿ ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮಾಡುತ್ತಿದ್ದಾರೆ ಎಂದರೆ ಸರಿ. ಆ ಶಾಲೆಗೆ ಆಟದ ಮೈದಾನ ಮತ್ತು ಕಂಪೌಂಡ್ ಇರುತ್ತದೆ ಎಂದರೆ ಸಾಕ್ಷಿಯು ಕಂಪೌಂಡ್ ಇದೆ ಆದರೆ ಆಟದ ಮೈದಾನ ಇಲ್ಲ ಎಂದು ನುಡಿದಿರುತ್ತಾರೆ. ಸದರಿ ಸರ್ಕಾರಿ ಶಾಲೆಯ ವಿಸ್ತೀರ್ಣ 5 ರಿಂದ 10 ಗುಂಟೆ ಇದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಶಾಲೆಯ ವಿಸ್ತೀರ್ಣ 3 ಗುಂಟೆ ಇರುತ್ತದೆ ಎಂದು ನುಡಿದಿರುತ್ತಾರೆ. ನಿಪಿ17 ರಿಂದ 20 ರ ದಾಖಲಾತಿಗಳನ್ನು ನಾನೇ ಸೃಷ್ಟಿಸಿ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಿಪಿ17ರಲ್ಲಿ ಸಂಬಂಧಪಟ್ಟ ಇಲಾಖಾ ಅಧಿಕಾರಿಗಳ ಸಹಿ ಇರುವುದಿಲ್ಲ ಎಂದರೆ ಸರಿಯಲ್ಲ.

ದಾವಾ ಅನುಸೂಚಿ ಸ್ವತ್ತನ್ನು ಸರ್ವೆ ಮಾಡಲು 2021ನೇ ಸಾಲಿನಲ್ಲಿ ನಾನು ಅರ್ಜಿ ಸಲ್ಲಿಸಿದ್ದೆ ಎಂದರೆ ಸರಿ. ಭೂಮಾಪಕರು ಅನುಸೂಚಿ ಸ್ವತ್ತಿನ ಆಜು ಬಾಜು ಜಮೀನಿನ ಮಾಲೀಕರಿಗೆ ನೋಟಿಸ್ ಜಾರಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ18ರ ಅನ್ವಯ ಸರ್ಕಾರಿ ಶಾಲೆಯ ಒಟ್ಟಾರೆ ವಿಸ್ತೀರ್ಣ 1 ಗುಂಟೆ ಎಂದರೆ ಸರಿ. ಭೂಮಾಪಕರು ಅನುಸೂಚಿ ಸ್ವತ್ತಿಗೆ ಭೇಟಿ ನೀಡಿಲ್ಲ ಎಂದರೆ ಸರಿಯಲ್ಲ. ನಾನು ಭೂಮಾಪಕರೊಂದಿಗೆ ಶಾಮೀಲಾಗಿ ನಿಪಿ 18ರ ದಾಖಲಾತಿಯನ್ನು ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳ ಮನೆಯ ಉತ್ತರ ದಿಕ್ಕಿಗೆ ಸರ್ಕಾರಿ ಶಾಲೆ ಇದೆ ಎಂದರೆ ಸಾಕ್ಷಿಯು ನಮ್ಮ ಜಮೀನು ಇರುತ್ತದೆ, ತದನಂತರ ಸರ್ಕಾರಿ ಶಾಲೆ ಇರುತ್ತದೆ ಎಂದು ನುಡಿದಿರುತ್ತಾರೆ. ನಮ್ಮ ಮನೆಯ ಪಕ್ಕದಲ್ಲಿಯೇ ನಾವು ಹಸು ಸಾಕಲು ಶೆಡ್ ನಿರ್ಮಿಸಿದ್ದೇವೆ ಎಂದರೆ ಸರಿ. ಉಳಿದ ಜಾಗದಲ್ಲಿ ನಾವು ತೋಟಗಾರಿಕೆಯನ್ನು ಮಾಡುತ್ತಿದ್ದೇವೆ ಎಂದರೆ ಸರಿ.

**ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗಾಗಿ ಸಮಯಾವಕಾಶ ಕೋರಿದ್ದರಿಂದ ಸಮಯ ನೀಡಿ ಮುಂದೂಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದ ಮುಖಾಂತರ ಬೆರಳಚ್ಚು ಮಾಡಿಸಿ ಸಾಕ್ಷಿದಾರರಿಗೆ ಓದಿ ಹೇಳಲಾಯಿತು)**

**ಓ.ಹೇ.ಕೇ. ಸರಿ ಇದೆ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ**
**ಪ್ರ.ದ.ನ್ಯಾಯಿಕ.ದಂಡಾಧಿಕಾರಿಗಳು, ಆನೇಕಲ್.**